ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಜುಲೈ 10 , 2014

**ಪತ್ರಿಕಾ ಪ್ರಕಟಣೆ**

# ಕೇಂದ್ರ ಬಜೆಟ್, ಕನಸುಗಳ ಮಾರಾಟ ಮುಂದುವರಿಕೆ : ಸಿದ್ಧರಾಮಯ್ಯ

**ಬೆಂಗಳೂರು, ಜುಲೈ 10 (ಕರ್ನಾಟಕ ವಾರ್ತೆ) :**

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಚುನಾವಣಾ ಪೂರ್ವದಲ್ಲಿ ಮಾಡಿದಂತೆಯೇ ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಅವರೂ ಕೂಡಾ ತಮ್ಮ ಚೊಚ್ಚಲ ಬಜೆಟ್‌ನಲ್ಲಿಯೂ *ಕನಸುಗಳ ಮಾರಾಟ*ವನ್ನು ಮುಂದುವರಿಸಿದ್ದಾರೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿದ್ದಾರೆ.

ಕನಸುಗಳ ಮಾರಾಟದ ಜೊತೆ ಜೊತೆಗೆ, ಹಣಕಾಸು ಸಚಿವರು ಭಾರೀ ಘೋಷಣೆಗಳನ್ನೂ ಮಾಡಿದ್ದಾರೆ. ಆದರೆ, ಘೋಷಿತ ಕಾರ್ಯಕ್ರಮಗಳಿಗೆ ಅಲ್ಪ ಮೊತ್ತದ ಅನುದಾನ ಒದಗಿಸಿ ಜನಸಾಮಾನ್ಯರನ್ನು ನಿರಾಶೆಗೊಳಿಸಿದ್ದಾರೆ ಬಡವರು ಮತ್ತು ರೈತರ ಪಾಲಿಗೆ *ಒಳ್ಳೆಯ ದಿನಗಳ*ನ್ನು ತರುವ ಯಾವ ಯೋಜನೆಗಳೂ ಈ ಬಜೆಟ್‌ನಲ್ಲಿ ಇಲ್ಲ. ಈ ಬಾರಿಯ ಬಜೆಟ್‌ನಲ್ಲಿ ಸಾಮಾಜಿಕ ಕ್ಷೇತ್ರ ವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದು ದೇಶದ ಜನರ ಪಾಲಿಗೆ ನಿಜವಾದ 'ಕಹಿ ಗುಳಿಗೆ' ಯಾಗಿದೆ. ಆದಾಯ ತೆರಿಗೆಯಲ್ಲಿ ಒಂದಷ್ಟು ರಿಯಾಯಿತಿ ನೀಡಿ ಮಧ್ಯಮ ವರ್ಗವನ್ನು ಸಂತುಷ್ಟಿಗೊಳಿಸುವ ಪ್ರಯತ್ನ ಮಾಡಿದ್ದಾರೆ ಎಂದು ಕೇಂದ್ರ ಬಜೆಟ್ ಕುರಿತಂತೆ ಮುಖ್ಯಮಂತ್ರಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸರ್ದಾರ್ ವಲ್ಲಭಬಾಯಿ ಪಟೇಲ್ ಪ್ರತಿಮೆ ಸ್ಥಾಪನೆಗೆ 200 ಕೋಟಿ ರೂ. ಅನುದಾನ ಮೀಸಲಿರಿಸಿರುವ ಶ್ರೀ ಅರುಣ್ ಜೇಟ್ಲಿ ಅವರು *ಬೇಟಿ ಬಚಾವೊ, ಬೇಟಿ ಪಡಾವೊ* ಯೋಜನೆಗೆ 100 ಕೋಟಿ ರೂ, ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಕ್ಕೆ 100 ಕೋಟಿ ರೂ, ನದಿ ಜೋಡಣೆ ಯೋಜನೆಯ ವಿಸ್ತೃತ ವರದಿ ತಯಾರಿಕೆಗೆ 100 ಕೋಟಿ ರೂ ಒದಗಿಸಲಾಗಿದೆ. ಮೋದಿ ಸರ್ಕಾರದ ಆದ್ಯತೆ ಏನು ? ಪ್ರತಿಮೆ ಸ್ಥಾಪನೆಯೋ ? ಗ್ರಾಮೀಣ ಅಭಿವೃದ್ಧಿಯೋ ? ಮೂಲಸೌಕರ್ಯ ಅಭಿವೃದ್ಧಿಯೋ ? ಎಂದು ಶ್ರೀ ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ.

ನಿರೀಕ್ಷೆಯಂತೆಯೇ ಮೋದಿ ಸರ್ಕಾರ ಭಾರೀ ಪ್ರಮಾಣದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಕೊಡುವ ದಾರಿಯಲ್ಲಿದೆ. ಇದಕ್ಕೆ ಅನುಗುಣವಾಗಿ ಸೂಕ್ಷ್ಮ ಕ್ಷೇತ್ರಗಳಾದ ರಕ್ಷಣಾ ಮತ್ತು ವಿಮಾ ಕ್ಷೇತ್ರಗಳಲ್ಲಿ ಶೇಕಡಾ 49 ರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ.

ಅಲ್ಲದೆ, 20 ಲಕ್ಷ ಜನಸಂಖ್ಯೆ ಇರುವ ನಗರಗಳಿಗೆ ಮೆಟ್ರೊ ಯೋಜನೆ ಕಲ್ಪಿಸುವುದಾಗಿ ಹೇಳಿರುವ ಶ್ರೀ ಜೇಟ್ಲಿ ಅವರು ಅದಕ್ಕೆ ಅನುದಾನ ಮೀಸಲಿರಿಸಿಲ್ಲ. ಅಹಮದಾಬಾದ್ ಮತ್ತು ಲಖನೌ ನಗರಗಳ ಮೆಟ್ರೊ ಯೋಜನೆಗಳಿಗೆ 100 ಕೋಟಿ ರೂ ಮಾತ್ರ ಒದಗಿಸಿದ್ದಾರೆ.

ಐದು ಐಐಟಿ ಮತ್ತು ಐದು ಐಐಎಂಗಳ ಸ್ಥಾಪನೆಗೆ ಘೋಷಣೆ ಮಾಡಿರುವ ಹಣಕಾಸು ಸಚಿವರು ಅದಕ್ಕಾಗಿ ಒದಗಿಸಿರುವ ಅನುದಾನ ಕೇವಲ 500 ಕೋಟಿ ರೂ. ಅಂದರೆ ತಲಾ 50 ಕೋಟಿ ರೂ ಮಾತ್ರ. ಭಾರತದ ಜ್ಞಾನಾಧಾರಿತ ನಗರಿ ಎಂಬ ಹಿರಿಮೆಗೆ ಪಾತ್ರವಾಗಿರುವ ಬೆಂಗಳೂರು ನಗರಕ್ಕಾಗಲೀ ಅಥವಾ ಕರ್ನಾಟಕಕ್ಕಾಗಲೀ ಯಾವುದೇ ಐಐಟಿ ಇಲ್ಲವೇ ಐಐಎಂ ನೀಡದಿರುವುದು ವಿಷಾದಕರ.

ಕೇಂದ್ರ ಹಣಕಾಸು ಸಚಿವರು ಎಲ್ಲರಿಗೂ ದಿನದ 24 ಗಂಟೆಯೂ ವಿದ್ಯುತ್ ಒದಗಿಸುವ ಘೋಷಣೆ ಮಾಡಿದ್ದಾರೆ. ಆದರೆ, ಗ್ರಾಮೀಣ ವಿದ್ಯುತ್ ಯೋಜನೆಗೆ ಒದಗಿಸಿರುವ ಅನುದಾನ ಕೇವಲ 500 ಕೋಟಿ ರೂ. ಮಾತ್ರ.

ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಕೃಷಿ ಮೂಲಸೌಕರ್ಯ ನಿಧಿಗೆ ಒದಗಿಸಿರುವ ಅನುದಾನ ಕೇವಲ 100 ಕೋಟಿ ರೂ. ಪಶುಪಾಲನೆ ಮತ್ತು ಒಳನಾಡು ಮೀನುಗಾರಿಕೆಗೆ ಕಾಯ್ದಿರಿಸಿರುವ ಅನುದಾನ 50 ಕೋಟಿ ರೂ ಮಾತ್ರ. ಅಂತೆಯೇ, ರಾಷ್ಟ್ರದಲ್ಲಿ 100 ಸ್ಮಾರ್ಟ್ ಸಿಟಿಗಳ ನಿರ್ಮಾಣಕ್ಕೆ 7060 ಕೋಟಿ ರೂ. ಅನುದಾನ ಮೀಸಲಿರಿಸಿದ್ದಾರೆ. ಅಂದರೆ ಒಂದು ನಗರ ನಿರ್ಮಾಣಕ್ಕೆ 70 ಕೋಟಿ ರೂ. ಇದು ಸಾಧ್ಯವೇ ? ಸಾಧುವೇ ? ಎಂದು ಶ್ರೀ ಸಿದ್ದರಾಮಯ್ಯ ಅವರು ವಿಶ್ಲೇಷಿಸಿದ್ದಾರೆ.

****************

ಡಿ ಪಿ ಎಂ